**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 17-05-1969**.

(ओम शान्ति, बापदादा. अव्यक्त मुरली 17-05-1969)

***ಜಾದೂ ಮಂತ್ರದ ದರ್ಪಣ*** (जादू मंत्र का दर्पण)

ಈ ಅವ್ಯಕ್ತ ಮಿಲನದ ಮೌಲ್ಯವನ್ನು ಅರಿತಿದ್ದೀರಾ? ಅವ್ಯಕ್ತ ರೂಪದ ಮಿಲನ ಮತ್ತು ವ್ಯಕ್ತ ರೂಪದ ಮಿಲನ ಇವೆರಡರಲ್ಲಿ ಅಂತರವಿದೆ, ಅವ್ಯಕ್ತ ಮಿಲನದ ಮೌಲ್ಯವಾಗಿದೆ ವ್ಯಕ್ತ ಭಾವವನ್ನು ಬಿಡುವುದು. ಈ ಮೌಲ್ಯವನ್ನು ಯಾರು ಎಷ್ಟು ಕೊಡುವರೋ ಅಷ್ಟೇ ಅವ್ಯಕ್ತ ಅಮೂಲ್ಯ ಮಿಲನದ ಅನುಭವ ಮಾಡುವರು. ನಾವು ಎಲ್ಲಿಯವರೆಗೆ ಮತ್ತು ಎಷ್ಟು ಸಮಯವನ್ನು ಕೊಟ್ಟಿದ್ದೇವೆ ಎಂದು ಈಗ ಪ್ರತಿಯೊಬ್ಬರೂ ತಮ್ಮನ್ನು ತಾವೇ ಕೇಳಿಕೊಳ್ಳಿ. ವರ್ತಮಾನ ಸಮಯ ಅವ್ಯಕ್ತ ಸ್ಥಿತಿಯಲ್ಲಿಯೇ ಸ್ಥಿತರಾಗುವ ಅವಶ್ಯಕತೆಯಿದೆ. ಆದರೆ ಫಲಿತಾಂಶವೇನಿದೆ ಎಂಬುದನ್ನು ಪ್ರತಿಯೊಬ್ಬರೂ ತಾವೇ ತಿಳಿದುಕೊಳ್ಳಬಹುದು ಮತ್ತು ಪರಸ್ಪರರ ಫಲಿತಾಂಶವನ್ನೂ ಸಹ ಸರಿಯಾಗಿ ತಿಳಿದುಕೊಳ್ಳಬಹುದು. ಆದ್ದರಿಂದ ಅವ್ಯಕ್ತ ಸ್ಥಿತಿಯ ಯಾವ ಅವಶ್ಯಕತೆ ಇದೆಯೋ ಅದನ್ನು ಪೂರ್ಣ ಮಾಡಬೇಕು. ತಮ್ಮೆಲ್ಲರ ಜೀವನದಲ್ಲಿ ಅವ್ಯಕ್ತ ಸ್ಥಿತಿಯಿದ್ದರೆ ಏನಾಗುವುದು ಗೊತ್ತೇ? ಪ್ರತಿಯೊಂದು ಕರ್ಮದಲ್ಲಿ ಅಲೌಕಿಕತೆ ಮತ್ತು ಪ್ರತಿ ಕರ್ಮ ಮಾಡುತ್ತಾ ಪ್ರತಿ ಕರ್ಮೇಂದ್ರಿಯದಿಂದ ಅತೀಂದ್ರಿಯ ಸುಖದ ಅನುಭವವಾಗುವುದು. ನಡೆ-ನುಡಿ ಹಾವ-ಭಾವದಲ್ಲಿ ಯಾವಾಗಲೂ ಅತೀಂದ್ರಿಯ ಸುಖ ಇರುವುದು. ಅಲೌಕಿಕತೆ ಮತ್ತು ಅತೀಂದ್ರಿಯ ಸುಖದ ಹೊಳಪು ಪ್ರತಿ ಕರ್ಮದಲ್ಲಿ ಕಂಡುಬರುವವು. ವ್ಯಕ್ತದಲ್ಲಿದ್ದರೂ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿರುವರೆಂದು ತಿಳಿಯುವುದು. ಒಂದು ವೇಳೆ ಈ ಎರಡನ್ನೂ ತಮ್ಮ ಕರ್ಮದಲ್ಲಿ ನೋಡಿದರೆ ಅವ್ಯಕ್ತ ಸ್ಥಿತಿಯಲ್ಲಿ ತಾವು ಸ್ಥಿತರಾಗಿದ್ದೀರಿ ಎಂದು ತಿಳಿದುಕೊಳ್ಳಿ, ಇಲ್ಲದಿದ್ದರೆ ಕೊರತೆಯಿದೆಯೆಂದು ತಿಳಿದು ಪುರುಷಾರ್ಥ ಮಾಡಿ.

ಅವ್ಯಕ್ತ ಸ್ಥಿತಿಯ ಪ್ರಾಪ್ತಿಗಾಗಿ ಆರಂಭದಿಂದ ಒಂದು ಸ್ಲೋಗನ್ ಅನ್ನು ಹೇಳುತ್ತಿದ್ದೇವೆ, ಒಂದು ವೇಳೆ ಅದು ನೆನಪಿದ್ದರೆ ಎಂದಿಗೂ ಯಾವುದೇ ಪ್ರಕಾರದ ಮಾಯೆಯ ವಿಘ್ನಗಳಿಂದ ಸೋಲಾಗುವುದಿಲ್ಲ. ಇಂತಹ ಸರ್ವೋತ್ತಮ ಸ್ಲೋಗನ್ ಪ್ರತಿಯೊಬ್ಬರಿಗೂ ನೆನಪಿದೆಯೇ? ಪ್ರತಿಯೊಂದು ಮುರಳಿಯಲ್ಲಿ ಭಿನ್ನ ಭಿನ್ನ ರೂಪದಿಂದ ಆ ಸ್ಲೋಗನ್ ಬರುತ್ತದೆ. (ಮನ್ಮನಾಭವ, ನಾವು ತಂದೆಯ ಮಕ್ಕಳಾಗಿದ್ದೇವೆ) ಅದಂತೂ ಇದ್ದೇ ಇದ್ದೇವೆ. ಆದರೆ ಪುರುಷಾರ್ಥ ಮಾಡುತ್ತಾ ಮಾಯೆಯ ವಿಘ್ನಗಳ ಮೇಲೆ ವಿಜಯ ಪ್ರಾಪ್ತಿ ಮಾಡಿಕೊಳ್ಳಲು ಯಾವ ಸ್ಲೋಗನ್ ಇದೆ? "ಸ್ವರ್ಗದ ಸ್ವರಾಜ್ಯ ನಮ್ಮ ಜನ್ಮಸಿದ್ಧ ಅಧಿಕಾರ' ಮತ್ತು 'ಸಂಗಮಯುಗದ ಸಮಯದಲ್ಲಿ ತಂದೆಯ ಖಜಾನೆ ಜನ್ಮಸಿದ್ಧ ಅಧಿಕಾರವಾಗಿದೆ." ಈ ಸ್ಲೋಗನ್ ಮರೆತಿರುವಿರಿ. ಅಧಿಕಾರ ಮರೆಯುವುದರಿಂದ ಏನಾಗುತ್ತದೆ? ನಾವು ಯಾವುದಕ್ಕೆ ಅಧಿಕಾರಿಯೆಂಬುದನ್ನು ಮರೆತಿರುವಿರಿ. ಇವೆಲ್ಲ ನಮ್ಮ ಜನ್ಮಸಿದ್ಧ ಅಧಿಕಾರವೆಂದು ತಿಳಿದಾಗ ಮಾಯೆಗೆ ಅಧೀನರಾಗುವುದಿಲ್ಲ. ಅಧೀನತೆಯಿಂದ ರಕ್ಷಿಸಿಕೊಳ್ಳಲು ತಮ್ಮನ್ನು ತಾವು ಅಧಿಕಾರಿಯೆಂದು ತಿಳಿದುಕೊಳ್ಳಬೇಕು. ಮೊದಲು ಸಂಗಮದ ಸುಖದ ಅಧಿಕಾರಿಗಳು ನಂತರ ಭವಿಷ್ಯದಲ್ಲಿ ಸ್ವರ್ಗದ ಸುಖದ ಅಧಿಕಾರಿಗಳು. ಆದ್ದರಿಂದ ತಮ್ಮ ಅಧಿಕಾರವನ್ನು ಮರೆಯಬೇಡಿ. ಯಾವಾಗ ತಮ್ಮ ಅಧಿಕಾರವನ್ನು ಮರೆಯುವಿರೋ ಆಗ ಯಾವುದಾದರೊಂದು ಮಾತಿಗೆ ಅಧೀನರಾಗುವಿರಿ ಮತ್ತು ಯಾರು ಪರಾಧೀನರಾಗುವರೋ ಅವರೆಂದಿಗೂ ಸುಖವಾಗಿರಲು ಸಾಧ್ಯವಿಲ್ಲ. ಪರಾಧೀನರು ಪ್ರತಿಯೊಂದು ವಿಷಯದಲ್ಲಿಯೂ ಮನಸಾ, ವಾಚ, ಕರ್ಮಣಾ ದುಃಖದ ಪ್ರಾಪ್ತಿಯಲ್ಲಿ ಇರುತ್ತಾರೆ. ಮತ್ತು ಯಾರು ಅಧಿಕಾರಿಗಳೋ ಅವರು ಅಧಿಕಾರದ ನಶೆ ಮತ್ತು ಖುಷಿಯಲ್ಲಿರುತ್ತಾರೆ. ಖುಷಿಯ ಕಾರಣದಿಂದ ಸುಖಗಳ ಸಂಪತ್ತು ಅವರ ಕೊರಳಲ್ಲಿ ಮಾಲೆಯ ರೂಪದಲ್ಲಿ ಪೋಣಿಸಲ್ಪಟ್ಟಿರುತ್ತದೆ. ಸತ್ಯಯುಗದ ಸುಖಗಳು ಗೊತ್ತಿವೆಯಲ್ಲವೇ? ಸತ್ಯಯುಗದ ಆಟಿಗೆಗಳು ಹೇಗಿರುತ್ತವೆ. ಅಲ್ಲಿ ರತ್ನಗಳೊಂದಿಗೆ ಆಟವಾಡುತ್ತೀರಿ. ತಾವು ಸತ್ಯಯುಗದ ಸುಖಗಳ ಮತ್ತು ಕಲಿಯುಗದ ದುಃಖಗಳ ಪಟ್ಟಿ(ಲಿಸ್ಟ)ಯನ್ನು ಹಾಕಿರುವಿರಿ. ಆದರೆ ಸಂಗಮಯುಗದ ಸುಖಗಳ ಪಟ್ಟಿಯನ್ನು ಮಾಡಿದರೆ ಇದರ ಎರಡರಷ್ಟು ಆಗುವುದು. ಇದೇ ಸತ್ಯಯುಗದ ಸಂಸ್ಕಾರವನ್ನು ಈಗ ತುಂಬಿಕೊಳ್ಳಬೇಕು. ಯಾವುದೇ ಮಾತಿನ ಚಿಂತೆಯಿಲ್ಲದೇ ಹೇಗೆ ಚಿಕ್ಕ ಮಕ್ಕಳು ಆಟದಲ್ಲಿಯೇ ವ್ಯಸ್ತರಾಗಿರುತ್ತಾರೆ, ಹಾಗೆಯೇ ಯಾವಾಗಲೂ ಸುಖದ ಪಟ್ಟಿ,

ರತ್ನಗಳಪಟ್ಟಿ ಬುದ್ಧಿಯಲ್ಲಿದ್ದಾಗ ಅಥವಾ ಈ ಸುಖರೂಪದ ರತ್ನಗಳೊಂದಿಗೆ ಆಟವಾಡುತ್ತಿದ್ದರೆ ನಾಟಕದ ಆಟದಲ್ಲಿ ಸೋಲಾಗುವುದಿಲ್ಲ. ಈಗ ಅಲ್ಲಲ್ಲಿ ಸೋಲಾಗುತ್ತಿರುತ್ತದೆ.

ಬಾಪ್ ದಾದಾರವರ ಸ್ನೇಹ ಮಕ್ಕಳೊಂದಿಗೆ ಎಷ್ಟಿದೆ? ಬಾಪ್ ದಾದಾರವರ ಸ್ನೇಹ ಅವಿನಾಶಿಯಾಗಿದೆ. ಮತ್ತು ಮಕ್ಕಳ ಸ್ನೇಹ ಒಮ್ಮೊಮ್ಮೆ ಒಂದೊಂದು ರೀತಿಯಾಗಿರುತ್ತದೆ, ಏಕರಸವಾಗಿರುವುದಿಲ್ಲ. ಒಮ್ಮೊಮ್ಮೆ ಬಹಳ ಸ್ನೇಹಮೂರ್ತಿಯಾಗಿ ಕಂಡು ಬಂದರೆ ಒಮ್ಮೊಮ್ಮೆ ಸ್ನೇಹದ ಮೂರ್ತಿಯ ಬದಲಿಗೆ ಯಾವ ಮೂರ್ತಿ ಕಾಣಿಸುತ್ತದೆ? ಇದ್ದರೆ ಸ್ನೇಹಿ ಇಲ್ಲವಾದರೆ ಸಂಕಟಮಯಿ ಮೂರ್ತಿ, ತಮ್ಮ ಮೂರ್ತಿಯನ್ನು ನೋಡಲು ಏನನ್ನು ತಮ್ಮ ಬಳಿ ಇಟ್ಟುಕೊಳ್ಳುವಿರಿ? ದರ್ಪಣ(ಕನ್ನಡಿ), ದರ್ಪಣ ಎಲ್ಲರ ಬಳಿ ಇದೆಯೇ? ದರ್ಪಣವಿದ್ದರೆ ತಮ್ಮ ಮುಖವನ್ನು ನೋಡುತ್ತಾ ಏನಾದರೂ ಕೊರತೆಯಿದ್ದರೆ ಅದನ್ನು ದೂರ ಮಾಡಿಕೊಳ್ಳುತ್ತೀರಿ. ಒಂದು ವೇಳೆ ದರ್ಪಣವೇ ಇಲ್ಲದಿದ್ದರೆ ಕೊರತೆಯನ್ನು ತುಂಬಲಾಗುವುದಿಲ್ಲ. ಆದ್ದರಿಂದ ಸದಾ ತಮ್ಮ ಬಳಿ ದರ್ಪಣವನ್ನಿಟ್ಟುಕೊಳ್ಳಿ. ಆದರೆ ಈ ದರ್ಪಣ ಹೇಗಿದೆಯೆಂದರೆ ನಮ್ಮ ಬಳಿಯಿದೆಯೆಂದು ತಾವು ತಿಳಿದುಕೊಳ್ಳುವಿರಿ ಆದರೆ ಅದು ಮಧ್ಯ-ಮಧ್ಯದಲ್ಲಿ ಮಾಯವಾಗುವುದು. ಜಾದೂ ಮಂತ್ರದ ದರ್ಪಣವಾಗಿದೆ, ಒಂದು ಕ್ಷಣದಲ್ಲಿ ಮಾಯವಾಗುತ್ತದೆ. ದರ್ಪಣ ಹೇಗೆ ಅವಿನಾಶಿಯಾಗಿ ಸದಾ ಇರಲು ಸಾಧ್ಯ? ಅದಕ್ಕೆ ಯಾವ ಮುಖ್ಯ ಯೋಗ್ಯತೆಗಳು ಇರಬೇಕು? ಯಾರು ಅರ್ಪಣಮಯರೋ ಅವರ ಹತ್ತಿರ ದರ್ಪಣವಿರುವುದು. ಅರ್ಪಣೆಯಾಗದಿದ್ದರೆ ದರ್ಪಣವೂ ಅವಿನಾಶಿಯಾಗಿರಲಾರದು. ದರ್ಪಣವಿರಲು ಮೊದಲು ತಮ್ಮನ್ನು ಪೂರ್ಣ ಅರ್ಪಣೆ ಮಾಡಿಕೊಳ್ಳಿ, ಅದನ್ನೇ ಬೇರೆ ಶಬ್ದಗಳಲ್ಲಿ ಸರ್ವಸ್ವ ತ್ಯಾಗಿಯೆಂದು ಹೇಳುತ್ತಾರೆ. ಸರ್ವಸ್ವ ತ್ಯಾಗಿಯ ಬಳಿ ದರ್ಪಣವಿರುತ್ತದೆ. ಅವ್ಯಕ್ತ ಮಿಲನವನ್ನು ಕೂಡ ಯಾರು ಅವ್ಯಕ್ತ ಸ್ಥಿತಿಯಲ್ಲಿರುವರೋ ಅವರೇ ಮಾಡಬಲ್ಲರು.

ವರ್ತಮಾನ ಸಮಯ ಅವ್ಯಕ್ತ ಸ್ಥಿತಿಯಲ್ಲಿ ಹೆಚ್ಚು ಕೊರತೆ ಕಂಡುಬರುತ್ತದೆ. ಒಂದು ಕಥನ(ವರ್ಣನೆ) ಇನ್ನೊಂದು ಮಂಥನ(ಮನನ). ಈ ಎರಡಂತೂ ಸರಿಯಿವೆಯಲ್ಲವೆ. ಈ ಎರಡೂ ಸಹಜವಾಗಿವೆ. ಮೂರನೆಯದು ಸ್ವಲ್ಪ ಸೂಕ್ಷ್ಮವಾಗಿದೆ. ವರ್ತಮಾನ ಸಮಯ ಯಾವ ಫಲಿತಾಂಶವನ್ನು ನೋಡುತ್ತಿದ್ದೇವೆಯೋ ಅದರಲ್ಲಿ ಮಂಥನಕ್ಕಿಂತ ಜಾಸ್ತಿ ಕಥನವಿದೆ. ಇನ್ನುಳಿದ ಮೂರನೆಯ ಮಾತು ಯಾವುದು? ಮಗ್ನರಾಗಿರುವುದು. ಅದು ಪೂರ್ಣ ಲವಲೀನ ಸ್ಥಿತಿ. ವರ್ತಮಾನ ಸಮಯ ಮಂಥನಕ್ಕಿಂತಲೂ ಹೆಚ್ಚು ಕಥನವಿದೆ. ಮೊದಲನೆಯ ನಂಬರ್ ಇದರಲ್ಲಿ ವಿಜಯಿಗಳು, ಎರಡನೆಯ ನಂಬರ್ ಮಂಥನದಲ್ಲಿ, ಮೂರನೆಯ ನಂಬರ್ ಮಗ್ನ ಸ್ಥಿತಿಯಲ್ಲಿ. ಇದೇ ಸ್ಥಿತಿಯಲ್ಲಿಯೇ ಕೊರತೆ ಕಂಡು ಬರುತ್ತದೆ, ಇದನ್ನು ತುಂಬಿಕೊಳ್ಳಬೇಕು. ಯಾರು ಮಗ್ನಸ್ಥಿತಿಯಲ್ಲಿ ಇರುವರೋ ಅವರ ನಡೆನುಡಿಯಲ್ಲಿ ಏನು ಕಂಡು ಬರುತ್ತದೆ? ಅಲೌಕಿಕತೆ ಮತ್ತು ಅತೀಂದ್ರಿಯ ಸುಖ. ಮಗ್ನಾವಸ್ಥೆಯವರ ಈ ಗುಣ ಅವರ ಪ್ರತಿ ಕರ್ಮದಿಂದ ಕಂಡು ಬರುವುದು. ಆದ್ದರಿಂದ ಈ ಕೊರತೆಯನ್ನು ದೂರ ಮಾಡಿಕೊಳ್ಳುವ ತೀವ್ರ ಪುರುಷಾರ್ಥವನ್ನು ಮಾಡಬೇಕು. ಎಲ್ಲರೂ ಪುರುಷಾರ್ಥಿಗಳೇ, ಆದ್ದರಿಂದಲೇ ಇಲ್ಲಿಯವರೆಗೆ ತಲುಪಿದ್ದೀರಿ. ಆದರೆ ಈಗ ಪುರುಷಾರ್ಥಿಯಾಗುವ ಸಮಯವಲ್ಲ, ತೀವ್ರ ಪುರುಷಾರ್ಥಿಗಳಾಗುವ ಸಮಯ. ತೀವ್ರ ಪುರುಷಾರ್ಥಿಗಳಾಗುವ ಬದಲು ಪುರುಷಾರ್ಥಿಗಳಾದರೆ ಏನಾಗುವುದು? ಗುರಿಯಿಂದ ದೂರವಾಗುವಿರಿ. ಈಗ ತೀವ್ರ ಪುರುಷಾರ್ಥಿಗಳಾಗುವ ಸಮಯವಾಗಿದೆ, ಇದರಿಂದ ಎಷ್ಟು ಲಾಭವನ್ನು ಪಡೆಯಬೇಕೋ ಅಷ್ಟು ಪಡೆದುಕೊಳ್ಳುತ್ತಿದ್ದೀರಾ ಎಂಬುದನ್ನು ಪ್ರತಿಯೊಬ್ಬರೂ ಪರಿಶೀಲಿಸಿಕೊಳ್ಳಬೇಕು. ಆದ್ದರಿಂದ ತಮ್ಮ ಬಳಿ ಸದಾ ದರ್ಪಣವನ್ನಿಟ್ಟುಕೊಂಡರೆ ತಕ್ಷಣವೇ ಗೊತ್ತಾಗುವುದು. ಆಗ ತಮ್ಮ ಪುರುಷಾರ್ಥವನ್ನು ತೀವ್ರವಾಗಿಸಿಕೊಂಡು ಮುಂದುವರೆಯುವಿರಿ.

ಇಂದು ಕುಮಾರಿಯರ ಸೇವೆಯ ತಿಲಕದ ದಿನವಾಗಿದೆ. ಹೇಗೆ ತಾವೆಲ್ಲರೂ ಸಂಗ್ರಹಾಲಯದಲ್ಲಿ ಪಟ್ಟಾಭಿಷೇಕದ ಚಿತ್ರವನ್ನು ತೋರಿಸಿದ್ದೀರೋ, ತಮ್ಮ ಸೇವೆಯ ತಿಲಕದ ದಿನವೂ ಎಷ್ಟು ದೊಡ್ಡ ಸಭೆ ನೋಡಿ, ಖುಷಿಯಾಗುತ್ತದೆಯೇ? ಆದರೆ ನೆನಪಿಟ್ಟುಕೊಳ್ಳಿ, ಎಷ್ಟು ಜನರ ಸಮ್ಮುಖದಲ್ಲಿ ತಿಲಕವನ್ನು ಹಚ್ಚಿಸಿಕೊಳ್ಳುತ್ತಿರುವಿರೋ ಅವರೆಲ್ಲ ನಿಮ್ಮನ್ನು ನೋಡುತ್ತಿರುವರು. ಎಲ್ಲರ ಮಧ್ಯದಲ್ಲಿ ತಿಲಕವನ್ನು ಇಡಲಾಗುತ್ತಿದೆ ಎಂಬುದನ್ನು ಮರೆಯಬೇಡಿ, ಈ ತಿಲಕದ ಗೌರವವನ್ನಿಡುವಷ್ಟು ಸಾಹಸಿಗರಾಗಬೇಕು.

ತಿಲಕದ ಗೌರವ ಅರ್ಥಾತ್, ಬ್ರಾಹ್ಮಣ ಕುಲದ ಗೌರವ ಮತ್ತು ಬ್ರಾಹ್ಮಣ ಕುಲದ ಮರ್ಯಾದೆಗಳನ್ನು ಕೇಳಿದ್ದೀರಲ್ಲವೆ? ಯಾರಿಗೆ ಈ ರೀತಿ ಪುರುಷೋತ್ತಮರಾಗುವ ಸಾಹಸವಿದೆಯೋ ಅವರು ತಿಲಕವನ್ನು ಹಚ್ಚಿಸಿಕೊಳ್ಳಿ. ಈ ತಿಲಕ ಸಾಧಾರಣವಾದದ್ದಲ್ಲ. ಅಲ್ಲಿಯೂ ಈ ಎಲ್ಲ ಸಭೆ ನೋಡುವುದು. ಕನ್ಯೆಯರ ಸೇವೆಯ ತಿಲಕಕ್ಕೆ ತಾವೆಲ್ಲ ಬ್ರಾಹ್ಮಣರು ಸೇರಿದ್ದೀರಿ, ಸೇವೆ ಮಾಡುವವರು ಒಂದು ವಿಶೇಷ ಗುಣದ ಕಡೆಗೆ ಗಮನವಿಟ್ಟುಕೊಳ್ಳಬೇಕು. ಸರ್ವತೋಮುಖ(ಆಲ್ ರೌಂಡರ್) ಸೇವೆ ಮಾಡುವವರು, ಎಂಥಹದ್ದೇ ಪರಿಸ್ಥಿತಿಯಿರಲಿ ತಮ್ಮ ಸ್ಥಿತಿ ಏಕರಸವಾಗಿರಬೇಕು. ಎಂಬ ಮುಖ್ಯ ಮಾತಿನ ಕಡೆಗೆ ಗಮನವಿಡಬೇಕು, ಆಗಲೇ ಇಂತಹ ಆಲ್ ರೌಂಡ್ ಸೇವೆಯಲ್ಲಿ ಸಫಲತೆ ಸಿಗುವುದು.

**ಎರಡನೆಯ ಗುಂಪಿನಲ್ಲಿ ತರಬೇತಿ ಪಡೆಯುವ ಕುಮಾರಿಯರಿಗೆ ಬಾಪದಾದಾ ತಿಲಕವನ್ನಿಟ್ಟು ಸಿಹಿ ಹಂಚಿದರು.**

ಒಳ್ಳೆಯದು ,ಇಂದು ಎಲ್ಲರೊಂದಿಗೆ ದೃಷ್ಟಿಯಿಂದಲೇ ಮಿಲನ ಮಾಡಿದೆವು ದೂರವಿದ್ದರೂ ಯೋಗ್ಯತೆ, ಶಕ್ತಿಗನುಸಾರವಾಗಿ ಬಾಪ್ ದಾದಾರವರ ಸಮೀಪವಿರುವಿರಿ. ಯಾರು ಎಷ್ಟೇ ದೂರ ಕುಳಿತುಕೊಂಡಿದ್ದರೂ ತಮ್ಮ ಸ್ನೇಹದಿಂದ ಬಾಪದಾದಾರವರ ಕಣ್ಣುಗಳಲ್ಲಿ ಸಮಾವೇಶಗೊಂಡಿರುವಿರಿ. ಆದ್ದರಿಂದ ಕಣ್ಮಣಿಯೆಂದು ಹೇಳುತ್ತೇವೆ. ಕಣ್ಮಣಿ ಗಳೊಂದಿಗೆ ಇಂದು ಕಣ್ಣಿನಿಂದಲೇ ಮಿಲನವನ್ನು ಮಾಡುತ್ತಿದ್ದೇವೆ. ಒಬ್ಬರಿಗಿಂತ ಒಬ್ಬರು ಪ್ರಿಯರು. ಸಮಯಾನುಸಾರ ಕೇವಲ ದೂರದಿಂದಲೇ ಮಿಲನ ಮಾಡುವಂತಹ ಸಮಯ ಬರುವುದೆಂದು ಸಾಕಾರದಲ್ಲಿ ಮಕ್ಕಳಿಗೆ ಸೂಚನೆಗಳು ಸಿಗುತ್ತಲೇ ಇದ್ದವು, ಈಗ ಆ ಸಮಯವನ್ನು ನೋಡುತ್ತಿರುವಿರಿ. ತಮ್ಮೆಲ್ಲರಿಗೂ ಮತ್ತು ತಂದೆಗೂ ಅನಿಸುತ್ತದೆ ಆದರೆ ಈಗ ಆ ಸಮಯ ಬದಲಾಯಿಸುತ್ತಿದೆ. ಸಮಯಾನುಸಾರ ಆ ಮಿಲನದ ಸೌಭಾಗ್ಯವೂ ಇನ್ನಿಲ್ಲ. ಆದ್ದರಿಂದ ಈಗ ಅವ್ಯಕ್ತ ರೂಪದಿಂದಲೇ ಎಲ್ಲರೊಂದಿಗೆ ಮಿಲನ ಮಾಡುತ್ತಿದ್ದೇವೆ. ಒಳ್ಳೆಯದು ಎಲ್ಲರಿಗೂ ನಮಸ್ತೆ ಮತ್ತು ವಿದಾಯ.

ಅವ್ಯಕ್ತ ಮುರಳಿ 17-05-1969.

**ಜಾದೂ ಮಂತ್ರದ ದರ್ಪಣ.**

ಆತ್ಮಿಕ ಸ್ಥಿತಿಯಲ್ಲಿ ಮನನ-ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

*ಆತ್ಮಿಕ ಸ್ಥಿತಿ/ಯೋಗ ಸ್ಥಿತಿ*

**ನಾನು ಆತ್ಮ ಸ್ನೇಹ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.**

1.ನಾನು ವ್ಯಕ್ತ ಭಾವವನ್ನು ಬಿಟ್ಟು ಬಾಪ್ ದಾದರವರೊಂದಿಗೆ ಅವ್ಯಕ್ತ ಅಮೂಲ್ಯ ಮಿಲನದ ಅನುಭವವನ್ನು ಮಾಡಿಕೊಂಡಿದ್ದೇನೆ.

2. ನಾನು ಪ್ರತೀಕರ್ಮದಲ್ಲಿ ಅಲೌಕಿಕತೆ ಮತ್ತು ಪ್ರತಿ ಕರ್ಮವನ್ನು ಮಾಡುತ್ತಾ ಪ್ರತಿಯೊಂದು ಕರ್ಮೇಂದ್ರಿಯದಿಂದ ಅತೀಂದ್ರಿಯ ಸುಖದ ಅನುಭವ ಮಾಡುವ ಅವ್ಯಕ್ತ ಸ್ವರೂಪ.

3. ನಾನು "ಸ್ವರ್ಗದ ರಾಜ್ಯ ನಮ್ಮ ಜನ್ಮ ಸಿದ್ಧ ಅಧಿಕಾರ" ಮತ್ತು "ಸಂಗಮ ಯುಗದಲ್ಲಿ ಬಾಬಾರವರ ಖಜಾನೆ ನಮ್ಮ ಜನ್ಮ ಸಿದ್ಧಅಧಿಕಾರ" ಈ ಎರಡು ವಿಷಯಗಳನ್ನು ಸ್ಮೃತಿಯಲ್ಲಿ ಇಟ್ಟು ಅವ್ಯಕ್ತ ಸ್ಥಿತಿಯನ್ನು ಹೊಂದಿ ಮಾಯೆ ಮೇಲೆ ವಿಜಯವನ್ನು ಸಾಧಿಸಿದ್ದೇನೆ.

4. ನಾನು ಸುಖಗಳ ಲಿಸ್ಟ್ ಮತ್ತು ರತ್ನಗಳ ಲಿಸ್ಟ್ ಅನ್ನು ಬುದ್ಧಿಯಲ್ಲಿ ಇಟ್ಟುಕೊಂಡು ಸುಖ ರೂಪಿ ರತ್ನಗಳೊಂದಿಗೆ ಆಟವಾಡಿಕೊಳ್ಳುವ ಡ್ರಾಮಆಟದ ವಿಜಯೀ ಸ್ವರೂಪ.

5.ನಾನು ಸತ್ಯಯುಗೀ ಸಂಸ್ಕಾರಗಳನ್ನು ಈಗಲೇ ನನ್ನಲ್ಲಿ ತುಂಬಿಕೊಳ್ಳುತ್ತಿದ್ದೇನೆ.

6. ನಾನು ಏಕರಸ ಸ್ನೇಹ ಸ್ವರೂಪ.

7. ನಾನು ನನ್ನ ಮೂರ್ತಿಯನ್ನು ನೋಡಿಕೊಳ್ಳಲು ಸಂಪೂರ್ಣ ಸಮರ್ಪಣೆ ಎಂಬ ದರ್ಪಣವನ್ನು ಸದಾ ನನ್ನ ಹತ್ತಿರ ಇಟ್ಟುಕೊಳ್ಳುವ ಸರ್ವಸ್ವತ್ಯಾಗಿ.

8. ನಾನು ದರ್ಪಣದಿಂದ ನನ್ನಲ್ಲಿರುವ ಲೋಪಗಳನ್ನು ತಿಳಿದುಕೊಂಡು ತಕ್ಷಣವೇ ನಿವಾರಿಸಿಕೊಳ್ಳುವ ತೀವ್ರ ಪುರುಷಾರ್ಥಿ.

8. ನಾನು ಸದಾ ಮಗ್ನ ಸ್ಥಿತಿಯಲ್ಲಿ ಇರುತ್ತಾ, ಅತಿಂದ್ರೀಯ ಸುಖವನ್ನು ಅನುಭವ ಮಾಡುತ್ತಿದ್ದೇನೆ.

9. ನಾನು ಸೇವಾ ತಿಲಕವನ್ನು ಧಾರಣೆ ಮಾಡಿ, ಬ್ರಾಹ್ಮಣ ಕುಲದ ಗೌರವವನ್ನು ಕಾಪಾಡುವ ಧೈರ್ಯ ಸ್ವರೂಪ.

10. ನಾನು ಎಂತಹ ಪರಿಸ್ಥಿತಿಯಲ್ಲಾದರೂ ನನ್ನ ಸ್ಥಿತಿಯನ್ನು ಏಕೀರಸವಾಗಿ ಇಟ್ಟುಕೊಂಡು ಆಲ್-ರೌಂಡ್ ಸೇವೆಯ ಸಫಲತೆಯನ್ನು ಹೊಂದಿದ್ದೇನೆ.

11.ನಾನು ಎಷ್ಟು ದೂರ ಇದ್ದರೂ ಸ್ನೇಹದಿಂದ ಬಾಪ್ ದಾದಾರವರ ನಯನಗಳಲ್ಲಿ ಸಮಾವೇಶವಾಗಿರುವ ಕಣ್ಮಣಿ.

ಹೆಚ್ಚಿನ ಮಾಹಿತಿಗಾಗಿ.

1.ಮನನ-ಚಿಂತನೆ(ಮನನ ಶಕ್ತಿ) : ಅವ್ಯಕ್ತ ಮುರಳಿ (01-02-1979 - ಮನನಶಕ್ತಿಯೇ ಮಾಯಾಜಿತ್ ರಾಗುವ ಸಾಧನ.

23-12-1987 - ಮನನ ಶಕ್ತಿ ಮತ್ತು ಮಗ್ನಸ್ಥಿತಿ.

10-01-1988 - ಮನನ ಮಾಡುವ ವಿಧಿ ಮತ್ತು ಮನನ ಶಕ್ತಿಯನ್ನು ಬೆಳೆಸಿಕೊಳ್ಳುವ ಯುಕ್ತಿಗಳು.

01-04-1981 - ಮನನ ಶಕ್ತಿಯ ಮೂಲಕ ಸರ್ವಶಕ್ತಿಗಳ ಸ್ವರೂಪದ ಅನುಭೂತಿ).

2. ಅತೀಂದ್ರಿಯ ಸುಖ: ಅವ್ಯಕ್ತ ಮುರಳಿ( 25-01-1974 : ನಿರಾಕಾರ ಸ್ವರೂಪದ ಸ್ಮೃತಿಯಲ್ಲಿರುವುದು ಹಾಗೂ ಆನಂದರಸವನ್ನು ತೆಗೆದುಕೊಳ್ಳುವ ಸಹಜ ವಿಧಿ).